# ಕೃಷಿ ಮಾಧ್ಯಮ ಕೇಂದ್ರ

## ಕೃಷಿ–ಗ್ರಾಮೀಣ–ಅಭಿವೃದ್ಧಿ ಪತ್ರಿಕೋದ್ಯಮ ತರಬೇತಿಗೆ ಅರ್ಜಿ ಆಹ್ವಾನ

- ಹಿನ್ನೆಲೆ: ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಫಾರ್ಮರ್ ಫಸ್ಟ್ ಟ್ರಸ್ಟ್ ಪ್ರಕಟಿಸುತ್ತಿರುವ 'ಅಡಿಕೆ ಪತ್ರಿಕೆ' ಕೃಷಿಕಪರ ಕೃಷಿ ಪತ್ರಿಕೋದ್ಯಮದ ಅನನ್ಯ ಪ್ರಯತ್ನ. ರೈತರ ಅಗತ್ಯಗಳನ್ನು ಆಧರಿಸಿದ ಲೇಖನಗಳಿಗೇ ಪ್ರಾಶಸ್ತ್ಯ. ರೈತರು ತಮ್ಮ ಅನುಭವ ಹಂಚಿಕೊಳ್ಳುವುದಕ್ಕೆ ಆದ್ಯತೆ. ಪತ್ರಿಕೆ 25 ವರ್ಷಗಳ ಹಿಂದೆ ಹಮ್ಮಿಕೊಂಡಿದ್ದ 'ಕೃಷಿಕರ ಕೈಗೆ ಲೇಖನಿ' ಆಂದೋಲನ ಅನೇಕ ಕೃಷಿ ಬರಹಗಾರರನ್ನು ರೂಪಿಸಿತು. ರಾಸಾಯನಿಕರಹಿತ ಕೃಷಿ, ನೆಲ–ಜಲ ಸಂರಕ್ಷಣೆ ಹಾಗೂ ವಿವಿಧ ಬೆಳೆಗಳ ಮೌಲ್ಯವರ್ಧನೆ ಕುರಿತು ವರ್ಷಾನುಗಟ್ಟಲೆ ವಿಶೇಷ ಲೇಖನಗಳನ್ನು ಪ್ರಕಟಿಸಿರುವ ಅಡಿಕೆ ಪತ್ರಿಕೆ ಕಳೆದೊಂದು ದಶಕದಿಂದ ಹಲಸಿನ ಮಾನವರ್ಧನೆಗೆ ಒತ್ತುನೀಡಿದೆ. ಪ್ರತಿ ಸಂಚಿಕೆಯೂ ಎಕ್ಸ್‌ಕ್ಲೂಸಿವ್ ಎಂಬಂತೆ ಪ್ರಕಟಗೊಳ್ಳುತ್ತಿರುವ ಈ ಪತ್ರಿಕೆ ಮಾಧ್ಯಮ ರಂಗದ ಅಚ್ಚರಿ; ಸಾವಿರಾರು ಕೃಷಿಕರ ನೆಚ್ಚಿನ ಸಂಗಾತಿ. ಅಡಿಕೆ ಪತ್ರಿಕೆ ಕುರಿತ ವಿವರಗಳಿಗೆ ಜಾಲತಾಣ – www.adikepatrike.com

- ಅಡಿಕೆ ಪತ್ರಿಕೆಯ ಆಶಯಗಳಿಗೆ ಪೂರಕವಾಗಿ 2000ನೇ ಇಸವಿಯ ಡಿಸೆಂಬರ್‌ನಲ್ಲಿ ಸಮಾನಾಸಕ್ತರು ಹುಟ್ಟುಹಾಕಿದ ಕೃಷಿ ಮಾಧ್ಯಮ ಕೇಂದ್ರ ಯಾವುದೇ ವಾಣಿಜ್ಯ ಉದ್ದೇಶ ಹೊಂದಿಲ್ಲದ ವೇದಿಕೆ.

- ಕೇಂದ್ರ 2003ರಿಂದ 2012ರ ವರೆಗೆ ನಡೆಸಿದ ಕೃಷಿ–ಗ್ರಾಮೀಣ ಪತ್ರಿಕೋದ್ಯಮ ತರಬೇತಿ ಈ ಕ್ಷೇತ್ರದಲ್ಲಿ ಒಂದು ಹೊಸ ಪ್ರಯೋಗ. ಶ್ರೀ ಪಡ್ರೆ, ನಾಗೇಶ ಹೆಗಡೆ, ಎಚ್.ಎನ್. ಆನಂದ, ಅಡ್ಡೂರು ಕೃಷ್ಣರಾವ್, ಶಿವಾನಂದ ಕಳವೆ, ಜಿ. ಕೃಷ್ಣಪ್ರಸಾದ್, ಮಲ್ಲಿಕಾರ್ಜುನ ಹೊಸಪಾಳ್ಯ, ಗಾಣಧಾಳು ಶ್ರೀಕಂಠ, ಆನಂದತೀರ್ಥ ಪ್ಯಾಟಿ, ಪೂರ್ಣಪ್ರಜ್ಞ ಬೇಳೂರು ಸೇರಿದಂತೆ ಅನೇಕರು ಸಂಪನ್ಮೂಲ ವ್ಯಕ್ತಿಗಳಾಗಿ ಕೇಂದ್ರದ ಜತೆಗಿದ್ದು, ಆಸಕ್ತ ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ತರಬೇತಿಯ ಆರಂಭದಲ್ಲಿ ರಾಜ್ಯದ ಯಾವುದಾದರೊಂದು ಗ್ರಾಮೀಣ ಸ್ಥಳದಲ್ಲಿ ಮೂರರಿಂದ ನಾಲ್ಕು ದಿನಗಳ ಪ್ರಾಥಮಿಕ ತರಬೇತಿ ಶಿಬಿರ ಏರ್ಪಡಿಸಲಾಗುತ್ತಿತ್ತು. ಗದಗ ಜಿಲ್ಲೆ ಹುಲಕೋಟಿಯ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರ,, ಧಾರವಾಡ ಜಿಲ್ಲೆ ಸೂರಶೆಟ್ಟಿಕೊಪ್ಪದ ಗ್ರಾಮಚೇತನ, ದಕ್ಷಿಣ ಕನ್ನಡ ಜಿಲ್ಲೆ ಕುಕ್ಕುಜಡ್ಕದ ಶ್ರೀರಂಗ~ಕಟ್ಟದಮಜಲು, ಮೈಸೂರು ಜಿಲ್ಲೆ ಹೊಸಹಳ್ಳಿಯ ವಿವೇಕ ಗಿರಿಜನ ಶೈಕ್ಷಣಿಕ ಕೇಂದ್ರ, ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕಿನ ಬೆಂಗಳಿ, ಚಿಕ್ಕಮಗಳೂರು ಜಿಲ್ಲೆ

ಮೂಡಿಗೆರೆ ತಾಲೂಕಿನ ದೇವವೃಂದ ಹಾಗೂ ಧಾರವಾಡ ಸಮೀಪದ ಸುಮನ ಸಂಗಮ ಕಾಡುತೋಟದಲ್ಲಿ ಪ್ರಾಥಮಿಕ ಶಿಬಿರಗಳು ನಡೆದಿವೆ.

- ಕೇಂದ್ರದ ತರಬೇತಿಗೆ ಆಯ್ಕೆಯಾದವರು ವರ್ಷದ ಕೊನೆಯಲ್ಲಿ ಕೃಷಿ–ಗ್ರಾಮೀಣ ರಂಗದ ಕುರಿತು ನೈಜ ಕಾಳಜಿ ಹೊಂದಿರುವ ಲೇಖಕ/ಪತ್ರಕರ್ತರಾಗಿ ರೂಪುಗೊಳ್ಳಬೇಕೆಂಬ ಉದ್ದೇಶ ನಮ್ಮದು. ಅದಕ್ಕೆ ಅನುಗುಣವಾಗಿ ಇಡೀ ತರಬೇತಿಯನ್ನು ವಿನ್ಯಾಸಗೊಳಿಸಿದ್ದೆವು. ಪ್ರತಿ ವರ್ಷ ಕೇವಲ 20ರಿಂದ 25 ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗುತ್ತಿತ್ತು. ಅಭ್ಯರ್ಥಿಗಳು ಪ್ರತಿ ತಿಂಗಳು ಕೇಂದ್ರಕ್ಕೆ ಕಳುಹಿಸುವ ಲೇಖನ ಹಾಗೂ ತರಬೇತಿಯ ಅವಧಿಯಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಲೇಖನಗಳನ್ನು ಪರಿಗಣಿಸಿ ಅವರ ಪ್ರಗತಿ/ಸಾಧನೆಯ ಮೌಲ್ಯಮಾಪನ ಮಾಡಲಾಗುತ್ತಿತ್ತು. ಯಶಸ್ವಿ ಅಭ್ಯರ್ಥಿಗಳನ್ನು ಕಾಮ್ ಫೆಲೋಗಳೆಂದು ಗೌರವಿಸುತ್ತಿದ್ದೆವು.

- ಕೃಷಿಕರು, ವಿಜ್ಞಾನಿಗಳು, ಅಧಿಕಾರಿಗಳು, ಬೋಧಕರು, ಪತ್ರಕರ್ತರು, ಸ್ವಯಂಸೇವಾ ಸಂಸ್ಥೆಗಳ ಕಾರ್ಯಕರ್ತರನ್ನು ಒಳಗೊಂಡಂತೆ ವಿವಿಧ ವಲಯಗಳಿಗೆ ಸೇರಿದವರು ಕಾಮ್ ತರಬೇತಿ ಪಡೆದಿದ್ದಾರೆ. ಒಟ್ಟು 105 ಮಂದಿ ಕಾಮ್ ಫೆಲೋಗಳ ಪೈಕಿ ಅನೇಕರು ಸಮರ್ಥ ಬರಹಗಾರರಾಗಿ ಗುರುತಿಸಲ್ಪಟ್ಟಿದ್ದಾರೆ. ಅನುಸೂಯ ಎಸ್. ಶರ್ಮ, ರೇಖಾ ಸಂಪತ್, ಲೀಲಾ ನಾ. ಕೌಜಗೇರಿ, ಆರ್.ಬಿ. ಹಿರೇಮಠ, ಶೈಲಜಾ ಬೆಳ್ಳಂಕಿಮಠ, ವಿನೋದ ರಾ. ಪಾಟೀಲ, ಲಲಿತಾ ರಾವ್ ಎಂ. ಜಿ., ಪ್ರಕಾಶ್ ಭಟ್ ಕರ್ಕಿ, ಡಾ. ಗಣೇಶ ಹೆಗಡೆ ನೀಲೇಸರ, ಡಾ. ಕೆ.ಎಂ. ನಾಗರಾಜ, ಪರಮೇಶ್ವರಯ್ಯ ಸೊಪ್ಪಿಮಠ, ನಾಗರಾಜ ಮತ್ತಿಗಾರ, ಎಂ.ಜೆ. ದಿನೇಶ್, ಸಿ.ಎಸ್. ಸುರೇಶ್, ಎನ್.ಎಂ. ನಟರಾಜ್ ನಾಗಸಂದ್ರ, ಜಯರಾಮ ದೇವವೃಂದ, ಶಶಿಧರ್ ಸಕ್ಕರೆಮಕ್ಕಿ, ರವಿಶಂಕರ ದೊಡ್ಡಮಾಣಿ, ಹರ್ಷವರ್ಧನ ಶೀಲವಂತ, ಅಕ್ಷಯರಾಮ ಕೆ., ಅಚ್ಚನಹಳ್ಳಿ ಸುಚೇತನ, ಜಿ. ಗಣಪತಿ ಭಟ್, ಕೆ.ಎಸ್. ಪೂರ್ಣಿಮಾ, ಸಹನಾ ಕಾಂತಬೈಲು, ಮಾಲತಿ ಹೆಗಡೆ, ರಮಾ ಅರಕಲಗೂಡು, ಲಿಂಗರಾಜ ವಿ. ರಾಮಾಪುರ, ಸಿ. ಶಿವಾನಂದ ಮೊದಲಾದವರು ಬೇರೆಬೇರೆ ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿದ್ದಾರೆ. ಕೆಲವರ ಪುಸ್ತಕಗಳೂ ಪ್ರಕಟವಾಗಿವೆ.

- ಫೆಲೋಗಳಿಗಾಗಿ ಪುನರ್ಮನನ ಶಿಬಿರ ಕೂಡ ಆಯೋಜಿಸಿದ್ದೇವೆ. ಕಾಮ್ ಬಳಗಕ್ಕಾಗಿ ಕಾಮ್ ನ್ಯೂಸ್ ಎಂಬ ವಾರ್ತಾಪತ್ರ ಪ್ರಕಟಿಸುತ್ತಿದ್ದೆವು. ಕೆಲ ಸಮಯದ ಬಳಿಕ ಅದನ್ನೀಗ ಇ–ವಾರ್ತಾಪತ್ರವಾಗಿ ಹೊರತರುತ್ತಿದ್ದೇವೆ.

- ಕಾಮ್ ಫೆಲೋಗಳು, ಸಂಪನ್ಮೂಲ ವ್ಯಕ್ತಿಗಳು ಹಾಗೂ ಹಿತೈಷಿಗಳನ್ನೊಳಗೊಂಡ ವಾಟ್ಸಪ್ ಗುಂಪು ರಚಿಸಿದ್ದು ಈ ಮೂಲಕ ನಮ್ಮ ನಡುವಿನ ನಂಟು ಇನ್ನಷ್ಟು ಬಲಗೊಳ್ಳುತ್ತಿದೆ.

- ಕೃಷಿ-ಗ್ರಾಮೀಣ ಕ್ಷೇತ್ರಕ್ಕೆ ಸಂಬಂಧಿಸಿದ ಪುಸ್ತಕಗಳ ಪ್ರಕಟಣೆ ನಮ್ಮ ಇನ್ನೊಂದು ಪ್ರಮುಖ ಕಾರ್ಯ. ಈವರೆಗೆ 19 ಪುಸ್ತಕಗಳು ಪ್ರಕಟಗೊಂಡಿವೆ. ಹೊಸದಾಗಿ ಮೂರು ಪುಸ್ತಕಗಳು ಪ್ರಕಟಣೆಯ ಹಾದಿಯಲ್ಲಿವೆ.

- **ಕೃಷಿ-ಗ್ರಾಮೀಣ ಪತ್ರಿಕೋದ್ಯಮ ತರಬೇತಿಯನ್ನು ಕಾರಣಾಂತರಗಳಿಂದ ನಾಲ್ಕು ವರ್ಷಗಳ ಹಿಂದೆ ಸ್ಥಗಿತಗೊಳಿಸಲಾಗಿತ್ತು. ಆದರೆ ಇಂತಹ ತರಬೇತಿಯೊಂದರ ಅಗತ್ಯ ಮತ್ತು ಅದಕ್ಕೆ ಬೇಡಿಕೆ ಮುಂದುವರಿದೇ ಇತ್ತು. ಈಮಧ್ಯೆ ಸಂಪರ್ಕ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆ, ಸುಧಾರಣೆಗಳಾಗಿದ್ದು ಅವು ಮಾಧ್ಯಮ ರಂಗದ ಮೇಲೆಯೂ ಪ್ರಭಾವ ಬೀರಿವೆ. ಈ ಹಿನ್ನೆಲೆಯಲ್ಲಿ ಈಗಿನ ಕಾಲಮಾನಕ್ಕೆ ಅನುಗುಣವಾಗಿ ತರಬೇತಿಯನ್ನು ಪುನರ್‌ವಿನ್ಯಾಸಗೊಳಿಸಿ ಮತ್ತೆ ಆರಂಭಿಸುತ್ತಿದ್ದೇವೆ.**

- **ಇದು ಒಂದು ವರ್ಷ ಅವಧಿಯ ಕೋರ್ಸ್.**

- **ಮಾಧ್ಯಮ : ಕನ್ನಡ**

- **ಇಮೇಲ್ ಹಾಗೂ ವಾಟ್ಸಪ್ ಬಳಕೆಗೆ ಆದ್ಯತೆ ನೀಡಲಾಗಿದ್ದು ಇಡೀ ಕೋರ್ಸ್ ಸಂಪೂರ್ಣ ಕಾಗದರಹಿತವಾಗಿರುತ್ತದೆ.**

- **ಅಭ್ಯರ್ಥಿಗಳಿಗೆ ವಿದ್ಯಾರ್ಹತೆ ನಿಗದಿಪಡಿಸಿಲ್ಲ. ಆದರೆ ಕಂಪ್ಯೂಟರ್ ಬಳಕೆಯ ಪ್ರಾಥಮಿಕ ಜ್ಞಾನದ ಜತೆಗೆ ಬರಹ ಅಥವಾ ನುಡಿ ಬಳಸಿ ಕನ್ನಡದಲ್ಲಿ ಲೇಖನಗಳನ್ನು ಸಿದ್ಧಪಡಿಸಿ ಇಮೇಲ್ ಮೂಲಕ ಕಳುಹಿಸುವ ಸೌಲಭ್ಯ ಹೊಂದಿರುವುದು ಅಗತ್ಯ. ಸ್ಮಾರ್ಟ್ ಫೋನ್ ಹೊಂದಿದ್ದು ವಾಟ್ಸಪ್ ಬಳಕೆಯ ಪ್ರಾಥಮಿಕ ಜ್ಞಾನ ಹೊಂದಿರುವುದು ಕೂಡ ಅಗತ್ಯ.**

- ಲೇಖನ ಬರೆಯಲು ವಿಷಯದ ಆಯ್ಕೆಯಿಂದ ಹಿಡಿದು ಕ್ಷೇತ್ರಭೇಟಿ, ಸಂದರ್ಶನ ವಿಧಾನ, ಛಾಯಾಗ್ರಹಣ, ನುಡಿಚಿತ್ರ ಬರವಣಿಗೆ, ಪತ್ರಿಕೆಗಳಿಗೆ ಕಳುಹಿಸುವ ವಿಧಾನ ಸೇರಿದಂತೆ ವಿವಿಧ ಅಂಶಗಳ ಬಗ್ಗೆ **ಇಮೇಲ್ ಹಾಗೂ ವಾಟ್ಸಪ್ ಮೂಲಕ ಮಾಹಿತಿ, ಮಾರ್ಗದರ್ಶನ ನೀಡಲಾಗುವುದು.**

- ಈ ಹಿಂದೆ ತರಬೇತಿಯ ಆರಂಭದಲ್ಲಿ ಆಯೋಜಿಸುತ್ತಿದ್ದ ಪ್ರಾಥಮಿಕ ಶಿಬಿರವನ್ನು ಕೈಬಿಟ್ಟಿದ್ದು, ಅಭ್ಯರ್ಥಿಗಳಿಗೆ ಅಗತ್ಯವೆನಿಸಿದರೆ ಸಮೀಪದ ಕಾಮ್ ಸಂಪನ್ಮೂಲ ವ್ಯಕ್ತಿಗಳು ಅಥವಾ ಕಾಮ್ ಫೆಲೋಗಳ ಭೇಟಿಗೆ ಅವಕಾಶ ಕಲ್ಪಿಸಲಾಗುವುದು.

- **ಅಭ್ಯರ್ಥಿಗಳು ಪ್ರತಿ ತಿಂಗಳು ಕನಿಷ್ಠ ಒಂದು ಲೇಖನ ಸಿದ್ಧಪಡಿಸಿ ಇಮೇಲ್ ಮೂಲಕ ಕೇಂದ್ರಕ್ಕೆ ಕಳುಹಿಸಬೇಕು.** ಅದನ್ನು ಪರಿಶೀಲಿಸಿ ಅಗತ್ಯ ಸಲಹೆ–ಸೂಚನೆ ನೀಡಲಾಗುವುದು. ನಂತರ ಅಭ್ಯರ್ಥಿಗಳು ಲೇಖನವನ್ನು ಪರಿಷ್ಕರಿಸಿ ಪತ್ರಿಕೆಗಳಿಗೆ ಕಳುಹಿಸಬಹುದು.

- ತರಬೇತಿಯ ಕೊನೆಯಲ್ಲಿ ಯಾವುದೇ ಪರೀಕ್ಷೆ ಇರುವುದಿಲ್ಲ. **ಅಭ್ಯರ್ಥಿಗಳು ಪ್ರತಿ ತಿಂಗಳು ಕೇಂದ್ರಕ್ಕೆ ಕಳುಹಿಸುವ ಲೇಖನ ಹಾಗೂ ತರಬೇತಿಯ ಅವಧಿಯಲ್ಲಿ ಪ್ರಕಟಗೊಳ್ಳುವ ಲೇಖನಗಳನ್ನು ಆಧರಿಸಿ ಅವರನ್ನು ಕಾಮ್ ಫೆಲೋ ಗೌರವಕ್ಕೆ ಆಯ್ಕೆಮಾಡಲಾಗುವುದು.**

- ಇಮೇಲ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 21.10.2016. ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆಮಾಡಿ, ಪಟ್ಟಿ ಪ್ರಕಟಿಸುವ ದಿನಾಂಕ: 31.10.2016. ಶುಲ್ಕ ಜಮಾ ಮಾಡಲು ಕೊನೆಯ ದಿನಾಂಕ 25.11.2016. ತರಬೇತಿಯ ಅವಧಿ: 01.12.2016ರಿಂದ ಒಂದು ವರ್ಷ.

- **ತರಬೇತಿಯ ಶುಲ್ಕ 2,500 ರೂ.** ಇದರಲ್ಲಿ ಸುಮಾರು 500 ರೂ. ಮೌಲ್ಯದ ಕಾಮ್ ಪುಸ್ತಕಗಳನ್ನು ನೀಡಲಾಗುವುದು. (ಶುಲ್ಕವನ್ನು ಕಾಮ್‌ನ ಬ್ಯಾಂಕ್ ಖಾತೆಗೆ ಜಮಾಮಾಡಬೇಕು. ಯಾವುದೇ ಕಾರಣಕ್ಕೆ ತರಬೇತಿಯಿಂದ ನಿರ್ಗಮಿಸಿದಲ್ಲಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.)
- ಗಮನಿಸಿ: ಇದು ಯಾವುದೇ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ತರಬೇತಿ ಅಲ್ಲ. ಉದ್ಯೋಗ ವಲಯಕ್ಕೆ ನಿಮ್ಮನ್ನು ತಯಾರು ಮಾಡುವುದು ನಮ್ಮ ತರಬೇತಿಯ ಉದ್ದೇಶ ಅಲ್ಲ. ಕೃಷಿ–ಗ್ರಾಮೀಣ ವಿಚಾರಗಳ ಬಗ್ಗೆ ಬರೆಯಬೇಕೆಂಬ ಆಸಕ್ತಿ ಹಾಗೂ ಕಾಳಜಿ ಹೊಂದಿರುವವರಿಗೆ ಮಾತ್ರ ಈ ತರಬೇತಿಯಿಂದ ಪ್ರಯೋಜನ.
- ಕೃಷಿ ಮಾಧ್ಯಮ ಕೇಂದ್ರದ ಈವರೆಗಿನ ಚಟುವಟಿಕೆಗಳ ವಿವರ ಈ ಜಾಲತಾಣದಲ್ಲಿದೆ – www.krushimadhyama.org. ಇನ್ನೇನಾದರೂ ವಿವರ ಬೇಕಿದ್ದರೆ ದಯವಿಟ್ಟು ಇಮೇಲ್ ಮಾಡಿ: camcourse2016@gmail.com

*****************************************************************

ಈ ಕೆಳಗೆ ನೀಡಿರುವ ಮಾದರಿಯಲ್ಲಿ ಕಂಪ್ಯೂಟರಿನಲ್ಲಿ ಅರ್ಜಿ ಸಿದ್ಧಪಡಿಸಿ ಇಮೇಲ್ ಮೂಲಕ ಕಳುಹಿಸಿ. ನಿಮ್ಮ ಭಾವಚಿತ್ರದ ಜೆಪೆಗ್ ಫೈಲ್ ಕೂಡ ಲಗ್ತೀಕರಿಸಿ. ಇಮೇಲ್ ವಿಳಾಸ: camcourse2016@gmail.com

.....................................................................................................................................................

# ಕೃಷಿ–ಗ್ರಾಮೀಣ–ಅಭಿವೃದ್ಧಿ ಪತ್ರಿಕೋದ್ಯಮ ತರಬೇತಿ 2016–17

- ಹೆಸರು :
- ವಿಳಾಸ :
- ಮೊಬೈಲ್ :
- ಇಮೇಲ್ ಐಡಿ :
- ವಯಸ್ಸು :
- ವಿದ್ಯಾರ್ಹತೆ :
- ಉದ್ಯೋಗ :
- ಸ್ಮಾರ್ಟ್ ಫೋನ್ ಇದೆಯೇ?
- ವಾಟ್ಸಪ್ ಬಳಸುತ್ತಿದ್ದೀರಾ?
- ಇಮೇಲ್ ಬಳಸುತ್ತಿದ್ದೀರಾ?
- ಕಂಪ್ಯೂಟರ್ ಸೌಲಭ್ಯ ಇದೆಯೇ? (ಸ್ವಂತದ್ದಾಗಿರಬೇಕೆಂದೇನೂ ಇಲ್ಲ.)
- ಕಂಪ್ಯೂಟರ್‌ನಲ್ಲಿ ಕನ್ನಡದಲ್ಲಿ ಟೈಪ್ ಮಾಡಬಲ್ಲಿರಾ? ಅಥವಾ ಲೇಖನವನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿಸಿ ಕಳುಹಿಸಬಲ್ಲಿರಾ?
- ಬರವಣಿಗೆಯಲ್ಲಿ ಅನುಭವ ಇದೆಯೇ? ಇದ್ದರೆ ಸಂಕ್ಷಿಪ್ತ ವಿವರ ನೀಡಿ
- ಛಾಯಾಗ್ರಹಣದಲ್ಲಿ ಅನುಭವ ಇದೆಯೇ? ಕ್ಯಾಮರಾ ಹೊಂದಿದ್ದೀರಾ?
- ಯಾವ ಕೃಷಿ ಪತ್ರಿಕೆಯನ್ನು ಓದುತ್ತಿದ್ದೀರಿ?
- ತರಬೇತಿ ಪಡೆಯುವ ಉದ್ದೇಶ?